**<u>ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ .ದಂ. ನ್ಯಾಯಾಲಯ, ಕುಣಿಗಲ್</u>**

**ಸಿ.ಸಿ.1075/2018**

ಸಾಕ್ಷಿದಾರರ ಹೆಸರು : ಡಾ. ನವೀನ್ ಆರ್

ತಂದೆಯ ಹೆಸರು : ರಂಗನಾಥ ಜಿ.

ವಯಸ್ಸು : 45 ವರ್ಷ

ಉದ್ಯೋಗ : ಹಿರಿಯ ತಜ್ಞ ವೈದ್ಯಾಧಿಕಾರಿ

ವಾಸ : ನೆಲಮಂಗಲ

**<u>ಸಾಕ್ಷಿಯನ್ನು ದಿನಾಂಕ:20.01.2026 ರಂದು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.</u>**

**<u>ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:</u>**

ನಾನು 2016ರಿಂದ ಇಲ್ಲಿಯವರೆಗೆ ಕುಣಿಗಲ್ ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕಃ 28.06.2018 ರಂದು ಚಾಸಾ.3 ರವರು ನಮ್ಮ ಆಸ್ಪತ್ರೆಗೆ ಅದೇ ದಿನ ಬೆಳಿಗ್ಗೆ 10.30 ರಲ್ಲಿ ಆದ ಅಪಘಾತದ ಹಿನ್ನಲೆಯೊಂದಿಗೆ ಚಿಕಿತ್ಸೆಗಾಗಿ ಬಂದಿದ್ದರು. ಅವರನ್ನು ನಾನು ಬೆಳಿಗ್ಗೆ 11.30 ಗಂಟೆಯ ಸಮಯದಲ್ಲಿ ಪರೀಕ್ಷಿಸಿದಾಗ ಚಾಸಾ.3 ರವರಿಗೆ ಬಲತೊಡೆಯ ಮೂಳೆ ಮುರಿದಿತ್ತು ಮತ್ತು ಬಲಗಾಲಿನ ಹತ್ತಿರ 2X1 ಸೆಂ.ಮೀ. ತರಚಿದ ಗಾಯ ಕಂಡು ಬಂದಿತ್ತು. ಸದರಿ ಗಾಯಗಳಲ್ಲಿ ಮೊದಲನೆಯ ತೀವ್ರ ಸ್ವರೂಪದ ಗಾಯ ಮತ್ತು ಎರಡನೇ ಗಾಯ ಸಾಮಾನ್ಯ ಸ್ವರೂಪದ ಗಾಯಗಳಾಗಿದ್ದವು. ಸದರಿ ಗಾಯಗಳು ತಾಜಾ ಗಾಯಗಳಾಗಿದ್ದವು. ಚಾಸಾ.3 ರವರಿಗೆ ನಾನು ಮೇಲಿನ ಗಾಯಗಳ ಕುರಿತು ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ. ಸಾಕ್ಷಿಯು ಗಾಯದ ಪ್ರಮಾಣ ಪತ್ರದಲ್ಲಿ ತನ್ನ ಸಹಿಯನ್ನು ಗುರುತಿಸಿದ ಕಾರಣ, ಸದರಿ ಗಾಯದ ಪ್ರಮಾಣ ಪತ್ರವನ್ನು **ನಿಪಿ.3** ಎಂದು, ಅದರಲ್ಲಿರುವ ಸಾಕ್ಷಿಯ

ಸಹಿಯನ್ನು **ನಿಪಿ.3(ಎ)** ಎಂದು ಗುರುತಿಸಲಾಗಿದೆ.

**ಪಾಟೀ ಸವಾಲುಃಆರೋಪಿ ಪರಃ ಶ್ರೀ. ವೈ ಆರ್ ಹೆಚ್ ವಕೀಲರಿಂದಃ**

ನಿಪಿ.3ರಲ್ಲಿ ಯಾವ ವಾಹನಗಳ ನಡುವೆ ಅಪಘಾತವಾಗಿತ್ತು ಎಂದು ನಮೂದಾಗಿಲ್ಲ ಎಂದರೆ ಸರಿ. ಈ ಪ್ರಕರಣದಲ್ಲಿ ಚಾಸಾ.3 ರವರನ್ನು ಹೊರತುಪಡಿಸಿ ಬೇರೆ ಯಾರು ಚಿಕಿತ್ಸೆ ಪಡೆದಿರುವುದಿಲ್ಲ. ಚಾಸಾ.3 ರವರಿಗೆ ಚಿಕಿತ್ಸೆ ನೀಡಿದ ನಂತರ ಪೊಲೀಸ್ ಠಾಣೆಗೆ ಮಾಹಿತಿ ನೀಡಿದ್ದೆ. ಚಾಸಾ.3 ರವರು ಚಿಕಿತ್ಸೆಗೆ ತಾವೇ ಬಂದಿದ್ದರು. ಚಾಸಾ.3 ರವರು ನಮ್ಮ ಆಸ್ಪತ್ರೆಗೆ ಚಿಕಿತ್ಸೆಗೆ ಬರುವ ಮೊದಲು ಬೇರೆ ಎಲ್ಲಿಯೂ ಚಿಕಿತ್ಸೆ ಪಡೆದಿರಲಿಲ್ಲ. ಮೂಳೆ ಮುರಿದು ಹೋದ ಬಗ್ಗೆ ನೋಡಿದರೂ ನಮ್ಮ ಅನುಭವದ ಮೇಲೆ ಹೇಳಬಹುದು. ಚಾಸಾ.3 ರವರನ್ನು ಹೆಚ್ಚಿನ ಚಿಕಿತ್ಸೆಗೆ ಮೂಳೆ ತಜ್ಞರಿಗೆ ರೆಫರ್ ಮಾಡಲಾಗಿತ್ತು. ನಿಪಿ.3ನ್ನು ನೀಡಲು ಪೊಲೀಸರಿಂದ ಬಂದಿದ್ದ ನಿವೇದನೆಯ ರೆಫರೆನ್ಸ್ ಸಂಖ್ಯೆ ಮತ್ತು ದಿನಾಂಕವನ್ನು ನಿಪಿ.3ರಲ್ಲಿ ನಮೂದಿಸಿರುವುದಿಲ್ಲ. ಚಾಸಾ.3ರವರು ಹೆಚ್ಚಿನ ಚಿಕಿತ್ಸೆ ಪಡೆದ ಕುರಿತು ಪೊಲೀಸರು ದಾಖಲೆಗಳನ್ನು ನೀಡಿದ್ದರು. ನಿಪಿ.3ರಲ್ಲಿ ನಮೂದಾಗಿರುವ ಗಾಯಗಳು ವಾಹನದಿಂದ skid ಆಗಿ ಬಿದ್ದಾಗಲೂ ಆಗಬಹುದು ಎಂದು ನುಡಿಯುತ್ತಾರೆ. ನಿಪಿ.3ರಲ್ಲಿ ನಮೂದಾಗಿರುವ ಗಾಯ ಗಾಯವಾದ ವ್ಯಕ್ತಿ ಆಸ್ಪತ್ರೆಗೆ ನಡೆದುಕೊಂಡು ಬರಲು ಸಾಧ್ಯವಿಲ್ಲ ಎಂದರೆ ಸರಿ. ನಿಪಿ.3ನ್ನು ಪೊಲೀಸರ ಕೋರಿಕೆಯ ಮೇರೆಗೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

( ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓ. ಹೇ.ಕೇ. ಸರಿ ಇದೆ .**

**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ .ದಂ .**
**ಕುಣಿಗಲ್**